# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| 1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1017 |
| 2. ಸದಸ್ಯರಹೆಸರು | : | ಪಿ.ಆರ್. ರಮೇಶ್ |
| 3. ಉತ್ತರಿಸಲು ನಿಗದಿಯಾಗಿದ್ದ ದಿನಾಂಕ | : | 24.02.2022 |
| 4. ಉತ್ತರಿಸುವಸಚಿವರು | : | ಜಲಸಂಪನ್ಮೂಲಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರಗಳು |
|---|---|---|
| ಅ) | ರಾಜ್ಯದ ಜಲ ಸಂಪನ್ಮೂಲ ಇಲಾಖೆ ವತಿಯಿಂದ ರಾಜ್ಯದಲ್ಲಿ ಉದ್ದೇಶಿಸಿರುವ ನದಿಗಳ ಜೋಡಣೆ ಯೋಜನೆಯಲ್ಲಿ ಯಾವ ಯಾವ ನದಿಗಳನ್ನು ಜೋಡಿಸಲು ಉದ್ದೇಶಿಸಲಾಗಿದೆ; ಅವುಗಳ ಬಗೆಗಿನ ಸಂಕ್ಷಿಪ್ತ ಮಾಹಿತಿ ನೀಡುವುದು. | ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆಯ(NWDA) ವತಿಯಿಂದ ರಾಜ್ಯದಲ್ಲಿನ ನದಿ ಜೋಡಣೆಗಳನ್ನು ರೂಪಿಸಲಾಗುತ್ತಿದ್ದು, ವಿವರಗಳು ಈ ಕೆಳಗಿನಂತಿವೆ;<br><br>ಬೇಡ್ತಿ-ವರದಾ ನದಿ ಜೋಡಣೆಯ ಕರಡು ವಿವರವಾದ ಯೋಜನಾ ವರದಿಯು ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆಯಿಂದ ರಾಜ್ಯದ ಅಭಿಪ್ರಾಯಕ್ಕಾಗಿ ಸ್ವೀಕೃತವಾಗಿದ್ದು, ಸದರಿ ಯೋಜನೆಯಡಿ 18.50 ಟಿಎಂಸಿ ನೀರನ್ನು ತಿರುಗಿಸಲು ಪ್ರಸ್ತಾಪಿಸಲಾಗಿದೆ. ಯೋಜನಾ ವರದಿಯು ಪರಿಶೀಲನೆಯಲ್ಲಿದೆ. |
| ಆ) | ಪ್ರಸ್ತುತ ಜಾರಿ ಇರುವ ನದಿಗಳ ಜೋಡಣೆ ಯೋಜನೆಯ ಪ್ರಗತಿಯೇನು; ಯಾವ ಹಂತದಲ್ಲಿದೆ;(ವಿವರ ನೀಡುವುದು) | ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆಯು ಪರ್ಯಾಯಗಳೊಂದಿಗೆ ಪ್ರಸ್ತಾಪಿಸಿದ ತಿರುವುಗೊಳಿಸಲು ಅಂದಾಜು ಮಾಡಿರುವ 21.27 ಟಿಎಂಸಿ ನೀರಿನ ಪ್ರಮಾಣವನ್ನು ಹೀರೇವಡ್ಡಟ್ಟಿ ಬಳಿ ನೀರನ್ನು ಶೇಖರಣೆ ಮಾಡಲು, ವಿಸ್ತೃತ ಯೋಜನೆಯನ್ನು National Perspective Plan ಅಡಿಯಲ್ಲಿ ವಿವರವಾದ ಯೋಜನಾ ವರದಿ ಸಿದ್ಧಪಡಿಸಲು ರಾಜ್ಯ ಸರ್ಕಾರವು ದಿನಾಂಕ:21.01.2021ರ ಪತ್ರದಲ್ಲಿ ಸಹಮತಿಯನ್ನು NWDA ಗೆ ತಿಳಿಸಿದ್ದು, ವರದಿಯನ್ನು NWDA ಇಂದ ನಿರೀಕ್ಷಿಸಲಾಗಿದೆ.<br><br>**<u>ನೇತ್ರಾವತಿ - ಹೇಮಾವತಿ ನದಿ ಜೋಡಣೆ</u>**<br><br>ನೇತ್ರಾವತಿ - ಹೇಮಾವತಿ ನದಿ ಜೋಡಣೆಯಡಿ 6.64 ಟಿಎಂಸಿ ಪ್ರಮಾಣವನ್ನು ತಿರುಗಿಸಲು ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆಯು ಯೋಜಿಸಿತ್ತು.<br><br>ನೇತ್ರಾವತಿ-ಹೇಮಾವತಿ ನದಿ ಜೋಡಣೆಗೆ ಗುರುತಿಸಲಾಗಿದ್ದ ಜಲಾನಯನ ಪ್ರದೇಶವು ಹಾಲಿ ನಿರ್ಮಾಣವಾಗುತ್ತಿರುವ ಎತ್ತಿನಹೊಳೆ ಯೋಜನೆಯ ಜಲಾನಯನ ಪ್ರದೇಶದಲ್ಲೇ ಬರುವುದರಿಂದ ಕರ್ನಾಟಕ ರಾಜ್ಯದ ಕೋರಿಕೆಯ ಮೇರೆಗೆ ನೇತ್ರಾವತಿ - ಹೇಮಾವತಿ ನದಿ ಜೋಡಣೆ ಯೋಜನೆಯನ್ನು ಕೈಬಿಡಲು N.W.D.A. ಸಂಸ್ಥೆಯು ನಿರ್ಧರಿಸಿದೆ.<br><br>ಬೇಡ್ತಿ-ಅಘನಾಶಿನಿ-ವರದಾ ನದಿ ಜೋಡಣೆ ಯೋಜನೆಯು ರಾಜ್ಯದಲ್ಲಿನ (Intra-State) ನದಿಜೋಡಣೆಯಾಗಿದ್ದು, ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆಯ ಪರಿಶೀಲನೆಯಲ್ಲಿದೆ. |
| ಇ) | ಸದರಿ ಯೋಜನೆಯಲ್ಲಿ ವಿವಿಧ ನದಿಗಳ ಜೋಡಣೆಗೆ ಸರ್ಕಾರದಿಂದ ನಿರ್ಧರಿಸಿರುವ ಕಾಲಮಿತಿ ಪಟ್ಟಿಯ ವಿವರಗಳನ್ನು ನೀಡುವುದು. | ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆಯ(NWDA) ವತಿಯಿಂದ ರಾಜ್ಯದಲ್ಲಿನ ನದಿ ಜೋಡಣೆಗಳನ್ನು ರೂಪಿಸಲಾಗುತ್ತಿದ್ದು, ಯೋಜನಾ ವರದಿಗಳು ಸಿದ್ಧವಾದ ನಂತರ, ಯೋಜನೆಯ ಶಕ್ಯತೆ, ಸಾಧಕ-ಬಾಧಕಗಳ ಕುರಿತು ಪರಿಶೀಲಿಸಿ, ಸಕ್ಷಮ ಪ್ರಾಧಿಕಾರಗಳ ಅಗತ್ಯ ತೀರುವಳಿ/ಅನುಮೋದನೆಗಳೊಂದಿಗೆ ಹಾಗೂ ಆರ್ಥಿಕ ನೆರವಿನೊಂದಿಗೆ ಅನುಷ್ಠಾನಗೊಳಿಸಲು ಸಾಧ್ಯವಾಗುತ್ತದೆ. |

**ಸಂಖ್ಯೆ: ಜಸಂಇ 08 ಕೃವಿಇ 2022**

**(ಗೋವಿಂದ ಎಂ. ಕಾರಜೋಳ)**
**ಜಲಸಂಪನ್ಮೂಲಸಚಿವರು**